ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ಗುರುತಿನ ಪ್ರಶ್ನೆ

ದಿನಾಂಕ : 23-03-2021 ಪ್ರಶ್ನೆ ಸಂಖ್ಯೆ : 257(1898)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 23-03-2021

ಉತ್ತರಿಸುವ ಸಚಿವರು: ಗಣಿ ಮತ್ತು ಭೂ ವಿಜ್ಞಾನ ಸಚಿವರು

ವಿಷಯ : ಸಿ.ಆರ್.ಜೆಡ್ ಮತ್ತು ನಾನ್.ಸಿ.ಆರ್.ಜೆಡ್ ವ್ಯಾಪ್ತಿಯ ಮರಳುಗಾರಿಕೆ ಕುರಿತು

(ಅ) ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಗುರುತಿಸಲಾದ CRZ ಮತ್ತು NON CRZ ಮರಳು ಬ್ಲಾಕ್‌ಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಗುರುತಿಸಿದ ಮರಳಿನ ಪ್ರಮಾಣವೆಷ್ಟು; (ಜಿಲ್ಲಾವಾರು, ಬ್ಲಾಕ್‌ವಾರು, ವರ್ಷವಾರು ಮಾಹಿತಿಯನ್ನು ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಮರಳಿನ ಬೇಡಿಕೆಯ ಪ್ರಮಾಣವೆಷ್ಟು; ಪೂರೈಸಲಾದ ಮರಳಿನ ಪ್ರಮಾಣವೆಷ್ಟು; ಸಂಗ್ರಹಿಸಲಾದ ರಾಜಧನದ ಮೊತ್ತವೆಷ್ಟು; ಪತ್ತೆ ಹಚ್ಚಲಾದ ಅಕ್ರಮ ಮರಳುಗಾರಿಕೆಯ ಪ್ರಕರಣಗಳೆಷ್ಟು; ವಶಪಡಿಸಿಕೊಳ್ಳಲಾದ ಮರಳಿನ ಪ್ರಮಾಣವೆಷ್ಟು; ವಸೂಲಾತಿ ಮಾಡಿದ ದಂಡದ ಪ್ರಮಾಣವೆಷ್ಟು; (ಜಿಲ್ಲಾವಾರು, ವರ್ಷವಾರು, ಪ್ರಕರಣವಾರು ಮಾಹಿತಿ ನೀಡುವುದು)

(ಇ) ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ CRZ ಮರಳಿನಿಂದ ನಿರ್ಮಿಸಲಾದ ರಸ್ತೆಗಳು, ಬಿಲ್ಡಿಂಗ್, ಸೇತುವೆ, ಕಿಂಡಿ, ಅಣೆಕಟ್ಟುಗಳ ಬಾಳಿಕೆ ಮತ್ತು ಗುಣಮಟ್ಟದ ಬಗ್ಗೆ ಸರ್ಕಾರವು ತಜ್ಞರ ವರದಿಯನ್ನು ಪಡೆದಿದೆಯೇ ; (ವರದಿಯ ಪ್ರತಿಯನ್ನು ನೀಡುವುದು)

(ಈ) ರೈತರು ಹಳ್ಳತೊರೆಗಳಿಂದ ತಮ್ಮ ಸ್ವಉಪಯೋಗಕ್ಕೆ ಮರಳನ್ನು ತೆಗೆಯಲು ಅವಕಾಶ ಕಲ್ಪಿಸಲಾಗುವುದೇ?